# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1236
2. ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19-12-2024
4. ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ. ಸಂ | ವಿಷಯ | ಉತ್ತರ |
|---|---|---|
| ಅ) | ನಮ್ಮ ಮೆಟ್ರೋದಲ್ಲಿ ಪ್ರತಿ ನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಎಷ್ಟು; ನಗರದ ಮುಂದಿನ ಐದು ವರ್ಷಗಳಲ್ಲಿ ನಗರದ ಯಾವ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿದೆ; ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ಇರುವ ಪಾರ್ಕಿಂಗ್ ಶುಲ್ಕ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಪಾರ್ಕಿಂಗ್ ಶುಲ್ಕ ಕಡಿಮೆ ಮಾಡುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು; | ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರತಿ ನಿತ್ಯ ಸರಾಸರಿ 7.87 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಾರೆ.<br><br>ಬೆಂಗಳೂರು ನಗರದಲ್ಲಿ ಮುಂದಿನ ಐದು ವರ್ಷಗಳಲ್ಲಿ ಮೆಟ್ರೋ ರೈಲು ಸಂಪರ್ಕ ಕಲ್ಪಿಸುವ ಯೋಜನೆಯ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.<br><br>ಬಿಎಂಟಿಸಿ ಮತ್ತು ಕೆಎಸ್ಆರ್‌ಸಿಟಿಸಿ ಸಂಸ್ಥೆಯವರು ವಾಹನ ನಿಲುಗಡೆಗೆ ವಿಧಿಸುತ್ತಿರುವ ಶುಲ್ಕಕ್ಕೆ ಹೋಲಿಸಿದಾಗ ಬಿಎಂಆರ್‌ಸಿಎಲ್ ಸಂಸ್ಥೆಯು ವಿಧಿಸುತ್ತಿರುವ ಪಾರ್ಕಿಂಗ್ ಶುಲ್ಕ ಕಡಿಮೆ ಇರುತ್ತದೆ.<br><br>ಆದಕಾರಣ ಸದರಿ ಶುಲ್ಕವನ್ನು ಕಡಿಮೆ ಮಾಡುವ ಪ್ರಸ್ತಾವನೆ ಸರಕಾರದ ಮುಂದೆ ಇರುವುದಿಲ್ಲ (ವಿವರವಾದ ಮಾಹಿತಿಯನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ). |
| ಆ) | ನಮ್ಮ ಮೆಟ್ರೋ ನಿಲ್ದಾಣದ ಸಮೀಪ ಹಲವು ಕಡೆಗಳಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ಸೌಲಭ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು? | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ವತಿಯಿಂದ 51 ಮೆಟ್ರೋ ನಿಲ್ದಾಣಗಳಿಗೆ 60 ಸ್ಥಳಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.<br><br>60 ಸ್ಥಳಗಳ ಪೈಕಿ 32 ಸ್ಥಳಗಳಲ್ಲಿ ನಾಲ್ಕು ಚಕ್ರದ ವಾಹನಗಳನ್ನು ನಿಲುಗಡೆ ಮಾಡಲು ವ್ಯವಸ್ಥೆ ಮಾಡಲಾಗಿದೆ.<br><br>ಉಳಿದ ಕಡೆ ಸ್ಥಳದ ಅಭಾವ ಇರುವುದರಿಂದ ಭೂ ಖರೀದಿ ಮಾಡಿ ವಾಹನ ನಿಲುಗಡೆ ವ್ಯವಸ್ಥೆ ಮಾಡಲು ಚಿಂತಿಸಲಾಗುತ್ತಿದೆ. |

| | | |
|---|---|---|
| ಇ) | ತುಮಕೂರು ಬೆಂಗಳೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂಚಾರ ದಟ್ಟಣೆ ನಿಯಂತ್ರಿಸಲು ನಮ್ಮ ಮೆಟ್ರೋದ ಸಂಪರ್ಕವನ್ನು ತುಮಕೂರುವರೆಗೂ ವಿಸ್ತರಿಸುವ ಕಾರ್ಯಸಾಧ್ಯತಾ ವರದಿ ತಯಾರಿಸುವ ಬಗ್ಗೆ ಕಳೆದ ಬಜೆಟ್‌ನಲ್ಲಿ ಘೋಷಣೆಯಾಗಿತ್ತೇ; ಘೋಷಣೆಯಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ಯಾವ ಕಾಲಮಿತಿಯಲ್ಲಿ ತುಮಕೂರುವರೆಗೂ ನಮ್ಮ ಮೆಟ್ರೋ ವಿಸ್ತರಣೆ ಮಾಡಲಾಗುವುದು? | ಬಂದಿರುತ್ತದೆ.<br><br>ಮಾದಾವರ (ಬಿಐಇಸಿ) ಮೆಟ್ರೋ ನಿಲ್ದಾಣದಿಂದ ತುಮಕೂರುವರೆಗೆ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಸರ್ಕಾರವು ದಿನಾಂಕ: 06.05.2024ರಂದು ಅನುಮೋದನೆಯನ್ನು ನೀಡಿರುತ್ತದೆ. ಸದರಿ ಯೋಜನೆಯು 2024-25ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿರುತ್ತದೆ.<br><br>ಪ್ರಸ್ತುತ, ಕಾರ್ಯಸಾಧ್ಯತಾ ಅಧ್ಯಯನ ಮಾಡಲು ಮೆ|| ಆರ್ವಿ ಅಸೋಸಿಯೇಟ್ಸ್ ಆರ್ಕಿಟೆಕ್ಟ್ಸ್ ಇಂಜಿನಿಯರ್ಸ್ ಅಂಡ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ವಹಿಸಲಾಗಿದೆ. ಕಾರ್ಯಸಾಧ್ಯತಾ ವರದಿಯು ಬಂದ ನಂತರ ಪರಿಶೀಲಿಸಲಾಗುವುದು. |

ಕಡತ ಸಂಖ್ಯೆ: ನಅಇ 194 ಪಿ.ಆರ್.ಜೆ 2024

**(ಡಿ. ಕೆ. ಶಿವಕುಮಾರ್)**

ಉಪ ಮುಖ್ಯಮಂತ್ರಿ

**ಅನುಬಂಧ-1**

# ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. **1021 (1236).**

*****

ಬೆಂಗಳೂರು ನಗರದಲ್ಲಿ ಮುಂದಿನ ಐದು ವರ್ಷಗಳಲ್ಲಿ ಮೆಟ್ರೋ ಸಂಪರ್ಕ ಕಲ್ಪಿಸುವ ವಿವರಗಳು ಈ ಕೆಳಕಂಡಂತಿವೆ:

1. **ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-2:**
   - ರೀಚ್–5 ಹೊಸ ಮಾರ್ಗ ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರದವರೆಗೆ 19.15 ಕಿ.ಮೀ.ಗಳ ಉದ್ದವಿರುತ್ತದೆ.
   - ರೀಚ್–6 ಹೊಸ ಮಾರ್ಗ ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ 21.26 ಕಿ.ಮೀ.ಗಳ ಉದ್ದವಿರುತ್ತದೆ.
2. **ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ–2ಎ & 2ಬಿ:**

   **ಹಂತ–2ಎ:** ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೃಷ್ಣರಾಜಪುರದವರೆಗೆ 19.75 ಕಿ.ಮೀ.ಗಳ ಉದ್ದವಿರುತ್ತದೆ.

   **ಹಂತ–2ಬಿ:** ಕೃಷ್ಣರಾಪುರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ 38.44 ಕಿ.ಮೀ.ಗಳ ಉದ್ದವಿರುತ್ತದೆ.
3. **ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-3:**
   - ಜೆ.ಪಿ. ನಗರ 4ನೇ ಹಂತದಿಂದ ಕೆಂಪಾಪುರದವರೆಗೆ 32.15 ಕಿ.ಮೀ.ಗಳ ಉದ್ದವಿರುತ್ತದೆ.
   - ಹೊಸಹಳ್ಳಿ ಮೆಟ್ರೋ ನಿಲ್ದಾಣದಿಂದ ಕಡಬಗೆರೆವರೆಗೆ 12.50 ಕಿ.ಮೀ.ಗಳ ಉದ್ದವಿರುತ್ತದೆ.

ಮುಂದಿನ ಐದು ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ 220.2 ಕಿ.ಮೀ.ಗಳ ಮೆಟ್ರೋ ಮಾರ್ಗವನ್ನು ಒಳಗೊಂಡಿರುತ್ತದೆ.

| | | |
|---|---|---|
| ಹಂತ-1 | - | 42.30 |
| ಹಂತ-2 | - | 75.06 |
| ಹಂತ-2ಎ & 2ಬಿ | - | 58.19 |
| ಹಂತ-3 | - | 44.65 |
| **ಒಟ್ಟು** | - | **220.20 ಕಿ.ಮೀ.ಗಳು** |

ಅನುಬಂಧ-2

# ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ವಿಧಾನ ಪರಿಷತ್ತಿನ ಸದಸ್ಯರಾದ **ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. **1021 (1236).**

**ಬಿಎಂಆರ್‌ಸಿಎಲ್ ಪಾರ್ಕಿಂಗ್ ಶುಲ್ಕ**

| ವಾಹನದ ಮಾದರಿ | ಪಾರ್ಕಿಂಗ್ ಶುಲ್ಕ | | |
|---|---|---|---|
| | ಮೊದಲ ನಾಲ್ಕು ಗಂಟೆಗೆ | ತದನಂತರ ಪ್ರತಿ ಗಂಟೆಗೆ | ದಿನದ ಗರಿಷ್ಠ ದರ |
| ದ್ವಿಚಕ್ರ ವಾಹನಗಳಿಗೆ | ರೂ. 15/- | ರೂ.5/- | ರೂ.30/- |
| ನಾಲ್ಕು ಚಕ್ರದ ವಾಹನಗಳಿಗೆ | ರೂ. 30/- | ರೂ.10/- | ರೂ.60/- |

ಸೂಚನೆ: ದಿನ ಅಂದರೆ ಮೆಟ್ರೋ ಸಂಚಾರ ಆರಂಭದಿಂದ ಕೊನೆಗೊಳ್ಳುವವರೆಗೆ.

**ಕೆಎಸ್‌ಆರ್‌ಟಿಸಿ ಪಾರ್ಕಿಂಗ್ ಶುಲ್ಕ**

| ವಾಹನದ ಮಾದರಿ | ಪಾರ್ಕಿಂಗ್ ಶುಲ್ಕ (ರೂ.) | | | | | |
|---|---|---|---|---|---|---|
| ಸಮಯ (ಗಂಟೆಗಳಲ್ಲಿ) | **0-2** | **2-4** | **4-8** | **8-12** | **12-24** | **24ಗಂಟೆ ಮತ್ತು ಮೇಲ್ಪಟ್ಟು** |
| ದ್ವಿಚಕ್ರ ವಾಹನಗಳಿಗೆ | 10/- | 20/- | 30/- | 40/- | 50/- | ದಿನ ಒಂದಕ್ಕೆ ರೂ. 100/- |
| ನಾಲ್ಕು ಚಕ್ರದ ವಾಹನಗಳಿಗೆ | 20/- | 40/- | 60/- | 80/- | 100/- | ದಿನ ಒಂದಕ್ಕೆ ರೂ. 200/- |

**ಬಿಎಂಟಿಸಿ ಪಾರ್ಕಿಂಗ್ ಶುಲ್ಕ**

| ಬಿಎಂಟಿಸಿ ಪಾರ್ಕಿಂಗ್ ಶುಲ್ಕ (ರೂ.ಗಳಲ್ಲಿ) | | | |
|---|---|---|---|
| ದ್ವಿಚಕ್ರ ವಾಹನಗಳಿಗೆ | ಶುಲ್ಕ | ನಾಲ್ಕು ಚಕ್ರದ ವಾಹನಗಳಿಗೆ | ಶುಲ್ಕ |
| 1 ಗಂಟೆಗೆ | 10/- | 1 ಗಂಟೆಗೆ | 20/- |
| 1 ರಿಂದ 2 ಗಂಟೆಗೆ | 15/- | 1 ರಿಂದ 2 ಗಂಟೆಗೆ | 30/- |
| 2 ರಿಂದ 3 ಗಂಟೆಗೆ | 20/- | 2 ರಿಂದ 3 ಗಂಟೆಗೆ | 40/- |
| 3 ರಿಂದ 4 ಗಂಟೆಗೆ | 25/- | 3 ರಿಂದ 4 ಗಂಟೆಗೆ | 50/- |
| 4 ರಿಂದ 5 ಗಂಟೆಗೆ | 30/- | 4 ರಿಂದ 5 ಗಂಟೆಗೆ | 60/- |
| 5 ರಿಂದ 6 ಗಂಟೆಗೆ | 35/- | 5 ರಿಂದ 6 ಗಂಟೆಗೆ | 70/- |
| 6 ರಿಂದ 7 ಗಂಟೆಗೆ | 40/- | 6 ರಿಂದ 7 ಗಂಟೆಗೆ | 80/- |
| 7 ರಿಂದ 8 ಗಂಟೆಗೆ | 45/- | 7 ರಿಂದ 8 ಗಂಟೆಗೆ | 90/- |
| 8 ರಿಂದ 9 ಗಂಟೆಗೆ | 50/- | 8 ರಿಂದ 9 ಗಂಟೆಗೆ | 100/- |
| 9 ರಿಂದ 10 ಗಂಟೆಗೆ | 55/- | 9 ರಿಂದ 10 ಗಂಟೆಗೆ | 110/- |
| 10 ರಿಂದ 12 ಗಂಟೆಗೆ | 60/- | 10 ರಿಂದ 12 ಗಂಟೆಗೆ | 120/- |
| 12 ರಿಂದ 24 ಗಂಟೆಗೆ | 100/- | 12 ರಿಂದ 24 ಗಂಟೆಗೆ | 160/- |
| ಒಂದು ತಿಂಗಳಿಗೆ | 1000/- | ಒಂದು ತಿಂಗಳಿಗೆ | 3000/- |